ಈ ದಿನ ದಿನಾಂಕಃ 31-10-2022 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀಸವಾಲು ತೀರ್ಪುಋಣಿದಾರರ ಪರ ವಕೀಲರಿಂದಃ

ದಾವಣಗೆರೆಯಲ್ಲಿನ ನನ್ನ ವಾಸದ ಕುರಿತು ಮತದಾರರ ಗುರುತಿನ ಚೀಟಿ ಇರುತ್ತದೆ. ಸುಮಾರು 15 ವರ್ಷಗಳಿಂದ ನಾನು ಮತದಾನವನ್ನು ದಾವಣಗೆರೆಯಲ್ಲಿ ಮಾಡುತ್ತಿದ್ದೇನೆ. ಆ ಮೊದಲು ಹೊದಿಗೆರೆಯಲ್ಲಿ ನಾನು ಮತದಾರರ ಚೀಟಿಯನ್ನು ಹೊಂದಿ ಮತದಾನವನ್ನು ಮಾಡುತ್ತಿದ್ದೆ. ಹೊದಿಗೆರೆಯಲ್ಲಿನ ಮತದಾರರ ಯಾದಿಯಲ್ಲಿ ನನ್ನ ಹೆಸರನ್ನು ತೆಗೆದುಹಾಕುವಂತೆ ನಾನು ಅರ್ಜಿ ಮಾಡಿಲ್ಲ. ನಾನು ಬಿ.ಎಸ್ ಸಿ ಪದವೀಧರ. ಮತದಾರರ ಚೀಟಿಯನ್ನು ಇನ್ನೊಂದು ಕಡೆ ಮಾಡಿಸಬೇಕಾದರೆ ಒಂದು ಕಡೆ ರದ್ದು ಮಾಡಬೇಕೆಂದು ನನಗೆ ಗೊತ್ತು.

2. ನನ್ನ ತಂದೆ 2001 ರಲ್ಲಿ ಮರಣ ಹೊಂದಿದ್ದಾರೆ. ನನ್ನ ತಾಯಿ ಜಯಮ್ಮ 1994 ರಲ್ಲಿ ಮರಣ ಹೊಂದಿದ್ದಾರೆ. ನನ್ನ ತಂದೆ ಶಾನುಬೋಗರಾಗಿದ್ದರು ಅವರು ನಿವೃತ್ತಿಯಾಗಿದ್ದರು ತಾರೀಖು ನನಗೆ ಗೊತ್ತಿಲ್ಲ. ಅವರು ಮೂಲತಃ ಹೊದಿಗೆರೆಯವರು. ಅರ್ಜಿಯ ಸ್ವತ್ತಿನ ಕಲಂನಲ್ಲಿ ಸರ್ವೆ ನಂ.94/10 ಎಂದು ದಾಖಲಾಗಿದೆ ಎಂದರೆ ಸಾಕ್ಷಿಯು ನಾನು ಬರೆಸಿಲ್ಲ ಎಂದು ನುಡಿಯುತ್ತಾರೆ.

3. ಸರ್ವೆ ನಂ.84/10 ಪಿ ಮೂಲ ನನ್ನ ತಂದೆಯ ಹೆಸರಿನಲ್ಲಿತ್ತು. ಸದರಿ ಜಮೀನು ಸರ್ಕಾರದಿಂದ ಉಂಬಳಿ ಜಮೀನು ಎಂದು ಮಂಜೂರಾಗಿತ್ತು.

ಮುಂದುವರೆದ ಪಾಟೀಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು**)**

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ. ಚನ್ನಗಿರಿ.